ಅಡಚಣೆಗಳೇನು ?

ಉ) ಆದ್ದರಿಂದ ಅದನ್ನು ಪುನರ್ ವಿಮರ್ಶೆ ಮಾಡಿ ಮಾಮೂಲಿನಂತೆ ಪ್ರತಿಶತ 15 ಅಂಕಗಳನ್ನು ಕೊಡಲಾಗುವುದೇ ?

ಶ್ರೀ.ಎಂ.ವೀರಪ್ಪಮೊಯಿಲಿ (ಮಖ್ಯಮಂತ್ರಿಗಳು):-

ಅ) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 3 ಬಿ ಪ್ರಕಾರ ಸರ್ಕಾರಿ ಸೇವೆಯಲ್ಲಿನ 'ಸಿ' ಮತ್ತು 'ಡಿ ' ಸಮೂಹದ ವೃಂದಗಳ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳು ಹೊಂದಿದ ಅಂಕಗಳಿಗೆ 15 ಕೃಪಾಂಕ ನೀಡಬೇಕು. ಈ ನೀತಿಯನ್ನು ಈವರೆಗೆ ಪರಿಷ್ಕರಿಸನಾಗಿಲ್ಲ.

ಆ) ಮೇಲೆ ವಿವರಿಸಿರುವ ನಿಯಮಗಳ ಅವಕಾಶದಂತೆ ಕೃಪಾಂಕ ನೀಡಲಾಗುವುದು.

ಇ) ಇಲ್ಲ

ಈ) ಪ್ರಶ್ನೆ 'ಇ' ಗೆ ಕೊಟ್ಟ ಉತ್ತರಿಂದ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಹಾಸನದಲ್ಲಿ ಕೆ.ಸ್.ಆರ್.ಟಿ.ಸಿ.ಯ ರೀಜನಲ್ ವರ್ಕ್‌ಶಾಪ್.

940(869) ಶ್ರಿ.ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ಥಳೀಯ ವರ್ಕ್‌ಶಾಪ್ ಪ್ರಾರಂಭಿಸಲು ಹಾಸನ ಪಟ್ಟಣದ ಪಕ್ಕದ ಅಡವಳ್ಳಿ ಗ್ರಾಮದಲ್ಲಿ 90 ಎಕರೆ ರೈತರ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಿರುವುದು ನಿಜವಲ್ಲವೇ?

ಆ) ಒಂದು ವೇಳೆ ಸದರಿ ವರ್ಕ್‌ಶಾಪ್‌ನ್ನು ಹಾಸನದಲ್ಲಿ ಪ್ರಾರಂಭಿಸದಿದ್ದಲ್ಲಿ ವಶಪಡಿಸಿಕೊಂಡಿರುವ ಜಮೀನನ್ನು ಸಂಬಂಧಪಟ್ಟ ರೈತರಿಗೆ ಹಿಂದಿರುಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರಿ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಹೌದು.

ಆ) ಇಲ್ಲ.

ಮಂಗಳೂರು ತಾಲ್ಲೂಕಿನ ಕೊಣಾಜಿಯಲ್ಲಿ ಪೋಲೀಸ್ ಸ್ಟೇಷನ್ ಮಂಜೂರಾತಿ ಬಗ್ಗೆ.

943(920) ಶ್ರಿ ಬಿ.ಎಂ.ಇದಿನಬ್ಬ (ಉಳ್ಳಾಲ):- ಮಾನ್ಯ ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ಉಳ್ಳಾಲ ಕ್ಷೇತ್ರದ ಕೊಣಜಿಯಲ್ಲಿ ಪೋಲಿಸ್ ಸ್ಟೇಷನ್ ಮಂಜೂರು ಮಾಡಲಾಗಿದೆಯೇ?